# 'ಸುಧಾ' ಜೊತೆಗಿನ ಓದುಗರ ಒಡನಾಟ

60 ವಜ್ರ ಮಹೋತ್ಸವ

### ಕಣ್ಮನ ತಣಿಸುವ 'ಸುಧಾ'

'ಸುಧಾ' ಕನ್ನಡಿಗರ ಪ್ರೀತಿಯ ಸಾಪ್ತಾಹಿಕ. ಹಿರಿಯರನ್ನು, ಕಿರಿಯರನ್ನು, ಆಧುನಿಕರನ್ನು, ಸಂಪ್ರದಾಯಸ್ಥರನ್ನು, ಜ್ಞಾನಪಿಪಾಸುಗಳನ್ನು, ಫ್ಯಾಷನ್‌ಪ್ರಿಯರನ್ನು, ವಿಭಿನ್ನ ಅಭಿರುಚಿಯುಳ್ಳವರೆಲ್ಲರನ್ನು ಸಂತೃಪ್ತಗೊಳಿಸುವ ಪತ್ರಿಕೆ! ಐದು ದಶಕಗಳಿಂದ ಓದುತ್ತ ಬಂದಿರುವ ನಾನು ಇಲ್ಲಿನ ಹೊಸ ಹೊಸ ಪ್ರಯೋಗಗಳನ್ನು ಕಂಡಿದ್ದೀನೆ, ಇದು ಅಪೇಕ್ಷಣೀಯವೂ ಹೌದು. ಸಾಹಿತ್ಯ, ವಿಜ್ಞಾನ–ತಂತ್ರಜ್ಞಾನ, ವ್ಯಕ್ತಿಚಿತ್ರ, ಜ್ಞಾನದೊಂದಿಗೆ ಮನರಂಜನೆ ನೀಡುತ್ತಿರುವ 'ಸುಧಾ' ಎಂದಿಗೂ ಬೆಳಗಲಿ.

—ಮಾಲತಿ ಪಟ್ಟಣಶೆಟ್ಟಿ

### ಕೈಹಿಡಿದ 'ಸುಧಾ'

ನನ್ನ ಕೈಹಿಡಿದ ನನ್ನ ಹೆಂಡತಿ ಸುಧಾಗೆ ಈಗ ಅರವತ್ತೆರಡು ವಸಂತಗಳು. ನಾವು ಪ್ರತಿವಾರ ಓದುವ ಅರ್ಥಪೂರ್ಣ ಕೈಪಿಡಿ 'ಸುಧಾ'ಗೆ 59 ತುಂಬಿತು!

ಅವಳು ಕೈಬಿಡಳು ಇವಳೂ ಕೈಬಿಡಳು! ಪತ್ರಿಕಾರಂಗದ ಧ್ರುವತಾರೆಯಂತೆ ಸದಾಕಾಲ 'ಸುಧಾ', ಓದುಗ ಅಭಿಮಾನಿಗಳ ಮನ–ಮನೆ ಬೆಳಗಲಿ ಎಂದು ಹಾರೈಸುವೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

### ಸಿಹಿ ನೆನಪುಗಳ ಸವಿಯಲ್ಲಿ...

'ಸುಧಾ' ನನ್ನ ಕುಟುಂಬದ ಆತ್ಮೀಯ ಸದಸ್ಯೆ ಅಷ್ಟೇ ಅಲ್ಲ, ಎರಡು ತಲೆಮಾರುಗಳ ಸುದೀರ್ಘ ಅವಧಿ ನಮ್ಮ ಮನೆ, ಮನ ಗೆದ್ದ ನಿಯತಕಾಲಿಕೆ!

ಈ ಸಂದರ್ಭದಲ್ಲಿ ನಾನು ಒಂದು ವಿಶೇಷ ಮತ್ತು ಕುತೂಹಲ ಕೆರಳಿಸಿದ್ದ ಹಾಸ್ಯ ಸಂಚಿಕೆ ಬಗ್ಗೆ ಹೇಳಲೇಬೇಕು. ನನಗೆ ನೆನಪಿರುವ ಹಾಗೆ ಒಮ್ಮೆ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ 'ಸುಧಾ' ವಿಶೇಷ ಹಾಸ್ಯ ಸಂಚಿಕೆ ತುಂಬಾ ವಿಭಿನ್ನವಾಗಿ ಬಿಡುಗಡೆ ಆಗಿತ್ತು. ಮುಖಪುಟವನ್ನು ತಲೆ ಕೆಳಗಾಗಿ ಮುದ್ರಿಸಿ ಲ್ಯಾಂಡ್‌ಸ್ಕೇಪ್ ಆಕಾರದಲ್ಲಿ ಓದುಗರನ್ನು ಕ್ಷಣಕಾಲ ಗಲಿಬಿಲಿಗೊಳಿಸಿತ್ತು.

ಇಷ್ಟಲ್ಲದೆ ಜಿ.ಪಿ. ರಾಜರತ್ನಂ, ಬೀಚಿ, ನರಸಿಂಹ ಮೂರ್ತಿ, ಟಿ. ಸುನಂದಮ್ಮ, ಕೇಫ, ಅ.ರಾ. ಮಿತ್ರ, ಡುಂಡಿರಾಜ್, ಲಾಂಗೂಲಾಚಾರ್ಯರು, ಎಚ್.ಎಸ್. ಕೇಶವಮೂರ್ತಿ, ವೈ.ಎನ್. ಗುಂಡುರಾವ್ ಮುಂತಾದವರ ಲೇಖನಗಳನ್ನು ಓದಿ ಸಂತೋಷ ಅನುಭವಿಸಿದ್ದ ನೆನಪು. ನಾಡಿಗ್, ಕೆ.ಆರ್. ಸ್ವಾಮಿ, ರಾಮಮೂರ್ತಿ ಮೊದಲಾದವರು ರಚಿಸಿದ ವ್ಯಂಗ್ಯಚಿತ್ರಗಳು ಮನರಂಜನೆ ನೀಡಿದ್ದವು.

ಕಾಲಕಾಲಕ್ಕೆ 'ಸುಧಾ' ಓದುಗರ ಅಂಕಣಗಳನ್ನು ಪರಿಚಯಿಸಿತು. ಟೀವಿ, ಮೊಬೈಲ್, ಸಾಮಾಜಿಕ ಜಾಲತಾಣಗಳ ಭರಾಟೆ ನಡುವೆ ನಮ್ಮ 'ಸುಧಾ' ವರ್ಷದಿಂದ ವರ್ಷಕ್ಕೆ ನವನವೀನ ರೀತಿ ಕಾಣಿಸಿಕೊಳ್ಳುತ್ತಿರುವುದು ಸಂತಸದ ವಿಷಯ.

—ಆರ್. ವೀರೇಶ್ ಕುಮಾರ್, ಬೆಂಗಳೂರು

### ಖುಷಿಯ ಜೊತೆಗಾತಿ

ಬಾಲ್ಯದಿಂದಲೂ ನನ್ನ ಮನಸೆಳೆದ ಸಂಗಾತಿ. ಅಪ್ಪ 'ಸುಧಾ' ಮನೆಗೆ ತಂದಾಗಲೆಲ್ಲಾ, ಓದಲು ಮಕ್ಕಳಲ್ಲಿ ಪೈಪೋಟಿಯೇ. ಹುಟ್ಟಿದ ಮಂಗಳೂರು, ಮೆಟ್ಟಿದ ಉಡುಪಿ, ಎರಡೂ ಕಡೆ ಇಂದಿಗೂ ಆಪ್ತ ಸಂಗಾತಿಯೇ... 'ಸುಧಾ' ಕೈ ಸೇರದಿದ್ದರೆ ಏನೋ ಖಾಲಿತನ ಕಾಡುತ್ತದೆ.

ಪ್ರಾರಂಭಿಕ ಹಂತದ ಕಥಾ ರಚನೆಗೂ 'ಸುಧಾ'ಳೇ ಸ್ಫೂರ್ತಿ ಎಂದರೆ ಅತಿಶಯೋಕ್ತಿಯಲ್ಲ. ನಿಮ್ಮ ಪುಟ, ಜಾಣರ ಪೆಟ್ಟಿಗೆ... ಇತ್ಯಾದಿ ಅಂಕಣಗಳು ಆಸ್ವಾದನೀಯ. ನನ್ನ ಬರವಣಿಗೆಯ ಹವ್ಯಾಸಕ್ಕೆ ಉತ್ತೇಜನ ನೀಡಿದೆ.

ಮರೆಯಲಾಗದ ಆಪ್ತ ಗೆಳತಿ ಇನ್ನೂ ಎತ್ತರಕ್ಕೆ ಏರಲಿ. 'ಸುಧಾ' ಎಂದೆಂದಿಗೂ ಬೆಳೆಯುತ್ತಾ ಖುಷಿಯ ಸುಧೆ ಹರಿಸಲಿ...

—ಸುಶೀಲಾ ಆರ್. ರಾವ್, ಉಡುಪಿ

### ಅಚ್ಚುಮೆಚ್ಚು

ಸುಮಾರು 40 ವರ್ಷಗಳಿಂದ 'ಸುಧಾ' ಓದುತ್ತಿದ್ದೇನೆ. ನಾವು ಸಣ್ಣವರಿದ್ದಾಗ, ನಮ್ಮ ತಂದೆ 'ಸುಧಾ' ತರಿಸುತ್ತಿದ್ದರು. ಆಗ ಅದರ ಬೆಲೆ ಸುಮಾರು 60 ಪೈಸೆ. ಮುಖಪುಟದಲ್ಲಿ ಖ್ಯಾತ ಯಕ್ಷಗಾನ ಕಲಾವಿದರ ಭಾವ ಮತ್ತು ವೇಷಭೂಷಣಗಳ ಚಿತ್ರಗಳು ಬರುತ್ತಿದ್ದವು. ಆಗಿನಿಂದ ಈಗಲೂ ನನಗೆ ಅಚ್ಚುಮೆಚ್ಚಿನ ವಾರಪತ್ರಿಕೆ.

—ಲಕ್ಷ್ಮಣರಾವ್ ಎಂ.ಎಲ್., ದಾವಣಗೆರೆ

### ಜ್ಞಾನಸುಧೆ ಹೆಚ್ಚಿಸಿದ 'ಸುಧಾ'

ನನಗಾಗ 10ರ ಹರೆಯ. 1965ರ ಜನವರಿ 11ರಂದು ಮೊತ್ತಮೊದಲ 'ಸುಧಾ' ಪತ್ರಿಕೆ ಕೈ ಸೇರಿದಾಗ ಅದೇನೋ ಪುಳಕ! ಎಲ್ಲ ವಯೋಮಾನದವರಿಗೂ ಹೊಂದುವ ವಿಷಯ ವೈವಿಧ್ಯ, ಸುಂದರ ಮುದ್ರಣ, ಆಕರ್ಷಕ ರಕ್ಷಾಪುಟಗಳಿಂದ 'ಸುಧಾ' ಬಂದಾಗ ಮೊದಲು ಓದಲು ನಾವು ಅಣ್ಣ ತಂಗಿಯರಲ್ಲಿ ಜಗಳ. ಅವಳಲ್ಲಿ ಏನುಂಟು ಏನಿಲ್ಲ!

ಮಕ್ಕಳಿಗೆ ಬಾಲವಿಹಾರ, ಫ್ಯಾಂಟಮ್, ಡಾಬೂ, ವಿಕ್ರಮ್, ಮಜನೂ, ಬುದ್ಧಿಮತ್ತೆಯ ಪರೀಕ್ಷೆಗೆ ಕೆಣಕು ತಿಣುಕು, ಮಹಿಳೆಯರಿಗೆ ಕಾಮಧೇನು, ರಂಗೋಲಿ, ಅಡುಗೆ, ಧಾರಾವಾಹಿಗಳು, ಯುವಕರಿಗೆ ಸಿನಿಮಾ ಪುಟ, ಒಂದೇ ಎರಡೇ?

'ಸುಧಾ' ಪತ್ರಿಕೆಯಲ್ಲಿ ಯಾವುದೇ ಧಾರಾವಾಹಿ ಪ್ರಕಟವಾಯಿತೆಂದರೆ ಅದು ಖಂಡಿತ ಚಲನಚಿತ್ರವಾಗುವುದೆಂಬ ನಂಬಿಕೆ! 'ಎಡಕಲ್ಲು ಗುಡ್ಡದ ಮೇಲೆ', 'ಮೃಗತೃಷ್ಣಾ', 'ಬೆಳದಿಂಗಳ ಬಾಲೆ', 'ಮಣ್ಣಿನ ದೋಣಿ' ಇನ್ನೂ ಹಲವು.

'ಸುಧಾ'ದಲ್ಲಿ ಪ್ರಕಟವಾದ ಧಾರಾವಾಹಿಗಳನ್ನು ಪ್ರತಿವಾರ ಜೋಡಿಸಿ ಪುಸ್ತಕದ ರೂಪದಲ್ಲಿ ಹೊಲಿದಿಡುತ್ತಿದ್ದೆ. ಅಂತಹ ಸುಮಾರು 20ಕ್ಕೂ ಹೆಚ್ಚು ಧಾರಾವಾಹಿಗಳು, ಕೆಣಕು ತಿಣುಕು ಅಂಕಣದ ಪುಟಗಳು ಇಂದಿಗೂ ನನ್ನ ಸಂಗ್ರಹದಲ್ಲಿವೆ. ಪತ್ರಿಕೆ ಹೀಗೇ ಸಾಗಲಿ ಎಂದು ಹಾರೈಸುತ್ತೇನೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ



ಚಿತ್ರಸಂಗ್ರಹ: ಕೆ.ಎಲ್. ಭಾರತಿ